ಅಸಲು ದಾವೆ ನಂಃ 76/2017 ಡಿ. ಡಬ್ಲ್ಯೂಃ 3–ಗುರುಶಾಂತಪ್ಪ ಅಮರೇಶ ಸೂಡಿ

ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕಃ 22/07/2025 ರಂದು ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ ವಾದಿ ಪರ ಶ್ರೀ RSK ವಕೀಲರಿಂದಃ**

1. ನನ್ನ ಸಾಕ್ಷಿ ಪ್ರಮಾಣ ಪತ್ರಕ್ಕೆ ಮಾಹಿತಿಯನ್ನು ನಮ್ಮ ವಕೀಲರು ನೀಡಿರುತ್ತಾರೆ. ನಮ್ಮ ಮೂಲ ಊರು ಬೇಲೇರಿಯಾಗಿರುತ್ತದೆ. ನಾವು ಈಗ ಡ.ಸ.ಹಡಗಲಿಯಲ್ಲಿ ಸುಣಗಾರ ಓಣಿಯಲ್ಲಿ ವಾಸವಾಗಿರುತ್ತೇವೆ. ದಾವಾ ಆಸ್ತಿಯು ತಳವಾರ ಓಣಿಯಲ್ಲಿ ಇರುತ್ತದೆ. ನಾನು ಕರ್ನಾಟಕ ರಕ್ಷಣಾ ವೇದಿಕೆಯ ಸದಸ್ಯನಾಗಿರುತ್ತೇನೆಂದರೆ ಸರಿ. ನಾನು ಕರ್ನಾಟಕ ರಕ್ಷಣಾ ವೇದಿಕೆಯ ಸದಸ್ಯನಾಗಿರುವುದರಿಂದ ಬಹಳಷ್ಟು ಪ್ರಕರಣಗಳನ್ನು ಬಗೆಹರಿಸುತ್ತೇನೆಂದರೆ ಸರಿಯಲ್ಲ. ನಾನು ದಾವಾ ಆಸ್ತಿಯನ್ನು ನೋಡಿರುವುದಿಲ್ಲ. ದಾವಾ ಆಸ್ತಿ ಸಂಖ್ಯೆ ಮತ್ತು ಚೆಕ್ಕು ಬಂದಿ ನನಗೆ ಗೊತ್ತಿಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಇರುವ ಸಂಗತಿಗಳು ಸುಳ್ಳು ಇವೆ ಎಂದರೆ ಸರಿಯಲ್ಲ. 1 ಮತ್ತು 2 ನೇ ಪ್ರತಿವಾದಿಯವರು ನನಗೆ ಆತ್ಮೀಯರಾಗಿರುತ್ತಾರೆಂದರೆ ಸಾಕ್ಷಿಯು ನಮ್ಮ ಓಣಿಯವರು ಆಗಿರುತ್ತಾರೆಂದು ನುಡಿದಿರುತ್ತಾರೆ. 1 ಮತ್ತು 2 ನೇ ಪ್ರತಿವಾದಿಯವರು ನನಗೆ ಆತ್ಮೀಯರಾಗಿರುವುದರಿಂದ ನಾನು ಸುಳ್ಳು ಸಾಕ್ಷ್ಯ ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ನ್ಯಾಯಾಲಯಕ್ಕೆ ಈ ದಾವೆಯಲ್ಲಿ ಪ್ರತಿವಾದಿಗಳ ಜೊತೆ ಬಹಳಷ್ಟು ಸಾರಿ ಹಾಜರಾಗಿರುತ್ತೇನೆ, ಹಾಗಾಗೀ ಇಂದಿನ ಮುದ್ದತ್ತಿನ ದಿನಾಂಕ ನನಗೆ ತಿಳಿದಿರುತ್ತದೆ. ಹಾಗಾಗೀ ಸ್ವತಃ ನಾನೇ ನ್ಯಾಯಾಲಯಕ್ಕೆ ಬಂದಿರುತ್ತೇನೆ. ನಾನು ನ್ಯಾಯಾಲಯಕ್ಕೆ ಯಾವ ಯಾವ ದಿನಾಂಕದಂದು ಹಾಜರಾಗಿರುತ್ತೇನೆಂದು ನನಗೆ ಗೊತ್ತಿಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಅದೆ.

**(ವಿಜಯಕುಮಾರ ಎನ್)**

ಹೆಚ್ಚುವರಿ ಸಿವಿಲ್ ಹಾಗೂ ಜೆ.ಎಮ್.ಎಫ್.ಸಿ

ನ್ಯಾಯಾಧೀಶರು ರೋಣ

ಅಸಲು ದಾವೆ ನಂಃ 76/2017 ಡಿ. ಡಬ್ಲ್ಯೂಃ2–ಫಕೀರಪ್ಪ ಬಸಪ್ಪ ಕೊಪ್ಪದ

ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕಃ 22/07/2025 ರಂದು ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ ವಾದಿ ಪರ ಶ್ರೀ RSK ವಕೀಲರಿಂದಃ**

1. ನನಗೆ ಓದಲು ಮತ್ತು ಬರೆಯಲು ಬರುವುದಿಲ್ಲ. ಆದರೆ ನಾನು ಸಹಿಯನ್ನು ಮಾಡುತ್ತೇನೆ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಇರುವ ಸಂಗತಿಗಳನ್ನು ನಾನು ಓದಿರುವುದಿಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಇರುವ ಸಂಗತಿಗಳನ್ನು ನನ್ನ ಮಗಳು ನನಗೆ ಓದಿ ತಿಳಿಸಿರುತ್ತಾಳೆ. ದಾವಾ ಆಸ್ತಿ ವಿ.ಪಿ.ಸಿ. ನಂಬರ 203 ಆಗಿರುತ್ತದೆ. ನಿಪಿ–3 ರಲ್ಲಿ ದೇವೇಂದ್ರಪ್ಪ ಬಸಪ್ಪ ಕೊಪ್ಪದ ರವರ ಹೆಸರು ಇರುತ್ತದೆ. ಹಾಗೆಂದು ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಮರಿತಮ್ಮಪ್ಪ ತಾಯಿ ಕೆಂಚವ್ವ ತಳವಾರ ರವರು ನಿಧನರಾಗಿರುತ್ತಾರೆ. ದಿನಾಂಕ 07/05/1955 ರಂದು ಮರಿತಮ್ಮಪ್ಪ ತಾಯಿ ಕೆಂಚವ್ವ ತಳವಾರ ರವರು ಬಸಪ್ಪ ತಂದೆ ರಾಮಪ್ಪ ತಳವಾರವರನ್ನು ದತ್ತಕ ತೆಗೆದುಕೊಂಡಿರುತ್ತಾರೆಂದರೆ ಸರಿಯಲ್ಲ. ಸಾಕ್ಷಿಗೆ ಸದರಿ ದತ್ತು ಪತ್ರವನ್ನು ತೋರಿಸಿದ್ದು ಸಾಕ್ಷಿಯು ನನಗೆ ಓದಲು ಬರುವುದಿಲ್ಲ, ಹಾಗಾಗೀ ಸದರಿ ದಾಖಲಾತಿ ನನಗೆ ಗೊತ್ತಾಗುವುದಿಲ್ಲ ಎಂದು ನುಡಿದಿರುತ್ತಾರೆ. ಸದರಿ ಬಸಪ್ಪ ತಂದೆ ರಾಮಪ್ಪ ತಳವಾರ ರವರ ಮಗ ಗೋಪಾಲ ತಂದೆ ಬಸಪ್ಪ ವಾಲ್ಮೀಕಿ ರವರು ಈ ದಾವೆಯ ವಾದಿಯಾಗಿರುತ್ತಾರೆಂದರೆ ಸರಿ. ಬಸಪ್ಪ ತಂದೆ ರಾಮಪ್ಪ ತಳವಾರ ರವರ ನೇರವಾರಸುದಾರರು ವಾದಿಯಾಗಿರುತ್ತಾರೆಂದರೆ ಸರಿಯಲ್ಲ. ದಾವಾ ಆಸ್ತಿಯ ಒಟ್ಟು ವಿಸ್ತೀರ್ಣ ಪೂರ್ವ–ಪಶ್ಚಿಮ 50 ಅಡಿ ಹಾಗೂ ಉತ್ತರ ದಕ್ಷಿಣ 25 ಅಡಿ ಇರುತ್ತದೆ ಎಂದರೆ ಸರಿ. ದಾವಾ ಆಸ್ತಿಯಲ್ಲಿ ಪೂರ್ವ ದಿಕ್ಕಿಗೆ ಪೂರ್ವ–ಪಶ್ಚಿಮ 18 ಅಡಿ ಹಾಗೂ ಉತ್ತರ ದಕ್ಷಿಣ 25 ಅಡಿ ಆಸ್ತಿಯಲ್ಲಿ 1 ರಿಂದ 4 ನೇ ಪ್ರತಿವಾದಿಗಳು ಇರುತ್ತಾರೆಂದರೆ ಸರಿ. ದಾವಾ ಆಸ್ತಿಯಲ್ಲಿ ಮಧ್ಯದಲ್ಲಿ ಪೂರ್ವ–ಪಶ್ಚಿಮ 16 ಅಡಿ ಹಾಗೂ ಉತ್ತರ ದಕ್ಷಿಣ 25 ಅಡಿ ಆಸ್ತಿಯಲ್ಲಿ ವಾದಿಯು ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಪಶ್ಚಿಮ ದಿಕ್ಕಿಗೆ ಪೂರ್ವ–ಪಶ್ಚಿಮ 16 ಅಡಿ ಹಾಗೂ ಉತ್ತರ ದಕ್ಷಿಣ 25 ಅಡಿ ಆಸ್ತಿಯಲ್ಲಿ 5 ರಿಂದ 7 ನೇ ಪ್ರತಿವಾದಿಗಳು ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ವಾದಿಯು ದಾವಾ ಆಸ್ತಿಯ ಮಧ್ಯದಲ್ಲಿ ಪೂರ್ವ–ಪಶ್ಚಿಮ 16 ಅಡಿ ಹಾಗೂ ಉತ್ತರ ದಕ್ಷಿಣ 25 ಅಡಿ ಆಸ್ತಿಯಲ್ಲಿ ವಾದಿಯು ಸ್ವಾಧೀನದಲ್ಲಿ ಇದ್ದರು ಸಹ ಇಲ್ಲಾ ಎಂದು ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ವಾದಿಯವರು ನ್ಯಾಯಾಂಗ ಇಲಾಖೆಯಲ್ಲಿ ಕರ್ತವ್ಯವನ್ನು ನಿರ್ವಹಿಸುತ್ತಿದ್ದರು ಎಂದರೆ ಸರಿ. ವಾದಿಯವರು 1 ತಿಂಗಳ ಹಿಂದೆ ನಿವೃತ್ತರಾಗಿರುತ್ತಾರೆಂದರೆ ನನಗೆ ಗೊತ್ತಿಲ್ಲ. ವಾದಿಯವರು ಸರ್ಕಾರಿ ನೌಕರಿಯಲ್ಲಿ ಇದ್ದಾಗ ಜಾಗವನ್ನು ಬಿಟ್ಟು ಕೊಡದೇ ಇದ್ದರೇ ನಿಮ್ಮ ಮೇಲೆ ದೂರನ್ನು ಕೊಟ್ಟು ಕೆಲಸವನ್ನು ಬಿಡಿಸುತ್ತೇವೆ ಎಂದು ವಾದಿಯವರಿಗೆ ಬೆದರಿಕೆ ಹಾಕುತ್ತಿದ್ದೇವು ಎಂದರೆ ಸರಿಯಲ್ಲ. ಸದರಿ ಸಂಗತಿಯ ಬಗ್ಗೆ ನನಗೆ

ನಮ್ಮ  ಊರಿನ ಹಿರಿಯರು ಸಾಕಷ್ಟು ಬಾರಿ ಬುದ್ದಿವಾದವನ್ನು ಹೇಳಿದ್ದರು ಎಂದರೆ ಸರಿಯಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಇರುವ  ಎಲ್ಲ ಸಂಗತಿಗಳು ಸುಳ್ಳು ಇವೆ ಎಂದರೆ ಸರಿಯಲ್ಲ. ವಾದಿಯವರ ಸ್ವಾಧೀನವನ್ನು ತಪ್ಪಿಸಬೇಕೆನ್ನುವ ಉದ್ದೇಶದಿಂದ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಅದೆ.

**(ವಿಜಯಕುಮಾರ ಎನ್ )**

ಹೆಚ್ಚುವರಿ ಸಿವಿಲ್ ಹಾಗೂ ಜೆ.ಎಮ್.ಎಫ್.ಸಿ

ನ್ಯಾಯಾಧೀಶರು ರೋಣ